ದಿಃ 15.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎ.ಎನ್.ಎಸ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿಂದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

(**ರಾಘವೇಂದ್ರ. ಡಿ**)

ಪ್ರ.ಹಿ.ದಿ.ನ್ಯಾಯಾಧೀಶರು,ಭದ್ರಾವತಿ.

ದಿಃ 11.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎ.ಎನ್.ಎಸ್ ವಕೀಲರಿಂದಃ**

1. ಪ್ರಥಮ ವರ್ತಮಾನ ವರದಿಯ ನಕಲು ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-01 ಎಂದು ಗುರುತಿಸಲಾಯಿತು. ಅದರ ಕನ್ನಡ ಅನುವಾದದ ಪ್ರತಿಯನ್ನು ನಿಪಿ-01(ಎ) ಎಂದು ಗುರುತಿಸಲಾಯಿತು.
2. ದೋಷಾರೋಪಣೆ ಪಟ್ಟಿಯ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-02 ಎಂದು ಗುರುತಿಸಲಾಯಿತು. ಅದರ ಕನ್ನಡ ಅನುವಾದದ ಪ್ರತಿಯನ್ನು ನಿಪಿ-02(ಎ) ಎಂದು ಗುರುತಿಸಲಾಯಿತು.
3. ಅಮಾನತ್ತು ಪಂಚನಾಮೆಯ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-03 ಎಂದು ಗುರುತಿಸಲಾಯಿತು. ಅದರ ಕನ್ನಡ ಅನುವಾದದ ಪ್ರತಿಯನ್ನು ನಿಪಿ-03(ಎ) ಎಂದು ಗುರುತಿಸಲಾಯಿತು.
4. Sabasteen ರವರ ಹೇಳಿಕೆಯ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-04 ಎಂದು ಗುರುತಿಸಲಾಯಿತು. ಅದರ ಕನ್ನಡ ಅನುವಾದ ಪ್ರತಿಯನ್ನು ನಿಪಿ-04(ಎ) ಎಂದು ಗುರುತಿಸಲಾಯಿತು.
5. ಸ್ಥಳಪಂಚಾನಮೆಯ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-05 ಎಂದು ಗುರುತಿಸಲಾಯಿತು. ಅದರ ಕನ್ನಡ ಅನುವಾದ ಪ್ರತಿಯನ್ನು ನಿಪಿ-05(ಎ) ಎಂದು ಗುರುತಿಸಲಾಯಿತು.
6. ಶವಪರೀಕ್ಷಾ ವರದಿಯ ನಕಲು ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-06 ಎಂದು ಗುರುತಿಸಲಾಯಿತು.

7. ಇಬ್ಬರ ಮಕ್ಕಳ ಎರಡು Achievement record ನ ಪ್ರತಿಯನ್ನು ಅನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ–07 ಮತ್ತು ನಿಪಿ–08 ಎಂದು ಗುರುತಿಸಲಾಯಿತು.
8. ಸಾಕ್ಷಿಯು ತನ್ನ ತಂದೆ ಮತ್ತು ತಾಯಿಯ ಆಧಾರ್ ಕಾರ್ಡಿನ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ–09 ಮತ್ತು ನಿಪಿ– 10 ಎಂದು ಗುರುತಿಸಲಾಯಿತು.
9. ಸಾಕ್ಷಿಯು ತನ್ನ ಎಸ್.ಎಸ್.ಎಲ್.ಸಿ ಅಂಕಪಟ್ಟಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ– 11 ಎಂದು ಗುರುತಿಸಲಾಯಿತು.
10. ಮೃತ ಪರಮೇಶ್ವರವರ ಮೂಲ ಅಂಕಪಟ್ಟಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ– 12 ಎಂದು ಗುರುತಿಸಲಾಯಿತು.
11. ಮೃತರ ಬ್ಯಾಂಕ್ ಸ್ಟೇಟ್‌ಮೆಂಟ್ ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ– 13 ಎಂದು ಗುರುತಿಸಲಾಯಿತು.
12. ಮೂರು ಭಾವಚಿತ್ರಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ– 14 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

(**ರಾಘವೇಂದ್ರ. ಡಿ**)
ಪ್ರ.ಹಿ.ದಿ.ನ್ಯಾಯಾಧೀಶರು, ಭದ್ರಾವತಿ.

ದಿಃ 18.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 01 ಮತ್ತು 02 ನೇ ಎದುರುದಾರರ ಪರ ಶ್ರೀ ಎ.ಎಸ್.ಕೆ ವಕೀಲರಿಂದಃ**

**1.** ನಮ್ಮ ಕುಟುಂಬದಲ್ಲಿ ನಾನು ಮತ್ತು ನನ್ನ ಇಬ್ಬರು ಮಕ್ಕಳು ವಾಸವಾಗಿರುತ್ತೇವೆ. ನನ್ನ ಗಂಡ ಷಾಯಿ ಗಾರ್ಮೆಂಟ್ಸ್ ನಲ್ಲಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು. ನನ್ನ ಗಂಡ ಷಾಯಿ ಗಾರ್ಮೆಂಟ್ಸ್ ನಲ್ಲಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ. ಬೇರೆಯವರಿಗೆ ಬಾಡಿಗೆಗೆ ಕೊಟ್ಟಿದ್ದರುಅವರಿಂದ ಬಾಡಿಗೆಗೆ ಪಡೆದು ವ್ಯಾಪಾರ ಮಾಡುತ್ತಿದ್ದರು. ನನ್ನ ಗಂಡನಿಗೆ ಪ್ರತಿತಿಂಗಳು 60 ಸಾವಿರ ವರಮಾನವಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ನನಗೆ ಖುದ್ದು ಮಾಹಿತಿ ಇರಲಿಲ್ಲ. ಆ ದಿವಸ 01 ಮತ್ತು 02 ನೇ ಎದುರುದಾರರು ನನ್ನ ಗಂಡ ಮತ್ತು ಇತರರು ಆ ದಿವಸ ಶಿಬರಿಮಲೆಗೆ ಹೊರಟ್ಟಿದ್ದರು ಎಂದರೆ ಸರಿ. ಆ ದಿವಸ ದಟ್ಟವಾದ ಮಂಜು ಇದ್ದ ಕಾರಣ ತಿರುವಿನಲ್ಲಿ ರಸ್ತೆ ಕಾಣದೆ ಇದ್ದ ಕಾರಣ ರಸ್ತೆಯ ಪಕ್ಕದ ಕಟ್ಟೆಗೆ ತಗಲು ಅಪಘಾತವಾಗಿರುತ್ತದೆ ಎಂದರೆ ಸಾಕ್ಷಿಯು ಆ, ದಿವಸ ಅವರು ನಿದ್ದೆ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಆ ದಿವಸ 01 ನೇ ಎದುರುದಾರರು ನಿಧಾನವಾಗಿ ವಾಹನ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. 1 ನೇ

ಎದುರುದಾರರ ಯಾವುದೇ ನಿರ್ಲಕ್ಷ್ಯ ಇರುವುದಿಲ್ಲ ಎಂದರೆ ಸರಿಯಲ್ಲ. 01 ನೇ ಎದುರುದಾರರ ತಪ್ಪಿನಿಂದ ಅಪಘಾತ ವಾಗಿರುವುದಿಲ್ಲ ಎಂದರೆ ಸರಿಯಲ್ಲ. 02 ನೇ ಎದುರುದಾರರು 03 ನೇ ಎದುರುದಾರರ ಬಳಿ ವಿಮೆ ಮಾಡಿಸಿದ್ದರೂ ಆ ಕಾರಣ 03 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಾಸ್ಥರು ಎಂದರೆ ಸರಿಯಲ್ಲ. 01 ಮತ್ತು 02 ನೇ ಎದುರುದಾರರು ಸೂಕ್ತ ದಾಖಲೆಗಳನ್ನು ಹೊಂದಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಕೇಳಿರುವಷ್ಟು ಪರಿಹಾರ ಪಡೆಯಲು ನಾನು ಬಾದ್ಯಾಸ್ಥಳಲ್ಲ ಎಂದರೆ ಸರಿಯಲ್ಲ.**03 ನೇ ಎದುರುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

(**ರಾಘವೇಂದ್ರ. ಡಿ**)
ಪ್ರ.ಹಿ.ದಿ.ನ್ಯಾಯಾಧೀಶರು, ಭದ್ರಾವತಿ.

ದಿಃ 04.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ 03 ನೇ ಎದುರುದಾರರ ಪರ ಶ್ರೀ ವಕೀಲರಿಂದಃ**

1. 01 ನೇ ಎದುರುದಾರರು ನನಗೆ ಪರಿಚಯವಿರುವುದಿಲ್ಲ. 01 ನೇ ಎದುರುದಾರರು ನನ್ನ ಗಂಡನಿಗೂ ಪರಿಚಯವಿರುವುದಿಲ್ಲ. 01 ನೇ ಎದುರುದಾರರು, ನನ್ನ ಗಂಡ ಹಾಗೂ ನನ್ನ ಇಬ್ಬರು ಮಕ್ಕಳು ಮಾಲೆ ಹಾಕಿಕೊಂಡು ಶಬರಿಮಲೈಗೆ ಹೋಗಿದ್ದರು ಎಂದರೆ ಸರಿ. ಒಟ್ಟು 05 ಜನ ಆ ದಿವಸ ಶಬರಿಮಲೈಗೆ ಹೋಗಿರುತ್ತಾರೆ. ಕಾರ್ 01 ನೇ ಎದುರುದಾರರಿಗೆ ಸೇರಿರುತ್ತದೆ. ಕಾರ್ತಿಕ್ ಎನ್ನುವವರು ಸಹ ಕಾರಿನಲ್ಲಿದ್ದರು. ನನ್ನ ಗಂಡ ಷಾಯಿ ಗಾರ್ಮೆಂಟ್ಸ ನಲ್ಲಿ ಕ್ಯಾಂಟಿನ್ ಕ್ಯಾಂಡಿಮೆಂಟ್ಸ ಇಟ್ಟಿದ್ದರು. ಷಾಯಿ ಗಾರ್ಮೆಂಟ್ಸ ಒಳಗಡೆ ಕ್ಯಾಂಟಿನ್ ಕ್ಯಾಂಡಿಮೆಂಟ್ಸ್ ನಡೆಸಲು ಕಂಪನಿಯ ಅನುಮತಿ ಪಡೆಯಬೇಕೆಂದರೆ ಸರಿ. ನನ್ನ ಗಂಡ ಷಾಯಿ ಗಾರ್ಮೆಂಟ್ಸ್ ನಿಂದ ಅನುಮತಿ ಪಡೆದಿದ್ದರೂ ಇಲ್ಲವೋ ನನಗೆ ಗೊತ್ತಿರುವುದಿಲ್ಲ, ಆದರೆ ನನ್ನ ಗಂಡ ಬಾಡಿಗೆಗೆ ಕ್ಯಾಂಟಿನ್ ಕ್ಯಾಂಡಿಮೆಂಟ್ಸ್ ನಡೆಸುತ್ತಿದ್ದರು. ನನ್ನ ಗಂಡ ಅವರ ಸ್ನೇಹಿತನಿಗೇ ಬಾಡಿಗೆಯನ್ನು ಕೊಡುತ್ತಿದ್ದರು. ಕೆಲವೊಮ್ಮೆ ಬಾಡಿಗೆಯನ್ನು ನಗದು ರೂಪದಲ್ಲಿ ಮತ್ತು ಕೆಲವೊಮ್ಮೆ ಫೋನ್ ಪೇ ಮೂಲಕ ವೆಂಕಟರಮಣರವರಿಗೆ ಕೊಡುತ್ತಿದ್ದರು.

2. ನನ್ನ ಗಂಡನ ಹೆಸರಿನಲ್ಲಿ ಬ್ಯಾಂಕ್ ಖಾತೆ ಇರುತ್ತದೆ ಎಂದರೆ ಸರಿ. ವ್ಯಾಪಾರದಿಂದ ಬಂದಂತಹ ಹಣವು ನನ್ನ ಗಂಡನ ಬ್ಯಾಂಕ್ ಖಾತೆಗೆ ಜಮಾ ಆಗುತ್ತಿತ್ತು ಎಂದರೆ ಸರಿ. ನನ್ನ ಗಂಡ ಸುಮಾರು 05 ವರ್ಷಗಳಿಂದ ಕ್ಯಾಂಟಿನ್ ಕ್ಯಾಂಡಿಮೆಂಟ್ಸ್ ನಡೆಸುತ್ತಿದ್ದರು. ನಾನು ಹಾಜರುಪಡಿಸಿರುವ ಬ್ಯಾಂಕ್ ಖಾತೆ ಎಸ್.ಬಿ.ಐ ಗೆ ಸೇರಿರುತ್ತದೆ ಎಂದರೆ ಸರಿ. ನಾನು ಮೂರು ತಿಂಗಳ ಬ್ಯಾಂಕ್ ಸ್ಟೇಟ್ಮೆಂಟ್ ಮಾತ್ರ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಬ್ಯಾಂಕಿನವರು ಒಂದು

ವರ್ಷದ ಬ್ಯಾಂಕ್ ಸ್ಟೇಟ್ಮೆಂಟ್ ಬೇಕೆಂದರೆ ಕೊಡುತ್ತಾರೆ ಎಂದರೆ ಸರಿ. ಕ್ಯಾಂಟಿನ್ ಕ್ಯಾಂಡಿಮೆಂಟ್ಸ್ ವ್ಯಾಪಾರದ ಹಣ ನನ್ನ ಖಾತೆಗೆ ಜಮಾ ಆಗುತ್ತಿರಲಿಲ್ಲ.

**3.** ನಾನು ಹಾಜರು ಪಡಿಸಿರುವ ಬ್ಯಾಂಕ್ ಸ್ಟೇಟ್ಮೆಂಟ್ ಪ್ರಕಾರ ಹಣವನ್ನು ನಾಗಮಂಗಲ ಬ್ಯಾಂಕಿನಿಂದ ಹಿಂಪಡೆದಿರುತ್ತಾರೆಂರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಬ್ಯಾಂಕ್ ಸ್ಟೇಟ್ಮೆಂಟ್ ಪ್ರಕಾರ ನನ್ನ ಗಂಡನಿಗೆ ತಿಂಗಳಿಗೆ 25 ಸಾವಿರಕ್ಕಿಂತ ಕಡಿಮೆ ವರಮಾನವಿತ್ತು ಎಂದರೆ ಸರಿಯಲ್ಲ. ಒಂದು ದಿವಸಕ್ಕೆ 30 ಸಾವಿರಕ್ಕಿಂತ ಹೆಚ್ಚು ವ್ಯಾಪಾರವಾಗುತ್ತಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಕೇವಲ 15 ದಿವಸಗಳ ಬ್ಯಾಂಕ್ ಸ್ಟೇಟ್ಮೆಂಟ್ ಅನ್ನು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನನ ಗಂಡ ತಿಂಗಳಿಗೆ 40 ಸಾವಿರ ಸಂಪಾದನೆ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 01 ನೇ ಎದುರುದಾರರ ಅಜಾಗರೂಕತೆಯಿಂದ ಆದ ಅಪಘಾತಕ್ಕೆ 03 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಾಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

(**ರಾಘವೇಂದ್ರ. ಡಿ**)
ಪ್ರ.ಹಿ.ದಿ.ನ್ಯಾಯಾಧೀಶರು,ಭದ್ರಾವತಿ.